# ಪ್ರಿನ್ಸ್ ಚಾರ್ಲ್ಸ್ ಆಗಮನ



ಬ್ರಿಟನ್ನಿನ ರಾಜಕುವರ ಚಾರ್ಲ್ಸ್ ನವೆಂಬರ್ 13ರಂದು ಭಾರತಕ್ಕೆ ಭೇಟಿ ಕೊಡಲಿದ್ದು, ಮರುದಿನ ಭಾರತದಲ್ಲೇ ತನ್ನ 71ನೇ ಹುಟ್ಟುಹಬ್ಬವನ್ನು ಆಚರಿಸಲಿದ್ದಾರೆ. ವಯಸ್ಸು 70 ದಾಟಿದರೂ ಇನ್ನೂ ಈತ ರಾಜನಾಗಿಲ್ಲದಿರುವುದಕ್ಕೆ ಹಲವು ಕಾರಣಗಳಿವೆ. ಅದರಲ್ಲಿ ಮುಖ್ಯವಾದದ್ದು ಆತನ ತಾಯಿ, ರಾಣಿ ಎಲಿಜಬೆತ್–2, ತಮ್ಮ 95ರ ಹರೆಯದಲ್ಲಿ ಇನ್ನೂ ಬ್ರಿಟನ್ ಅರಸೊತ್ತಿಗೆಯ ರಾಣಿಯಾಗಿಯೇ ಉಳಿದಿರುವುದು. ರಾಣಿಯ ನಿಧನದ ಬಳಿಕ ತನ್ನಿಂದ ತಾನೇ ಪ್ರಿನ್ಸ್ ಚಾರ್ಲ್ಸ್ ದೊರೆಯಾಗುತ್ತಾನೆ ಎನ್ನುತ್ತದೆ ಅಲ್ಲಿನ ರಾಜಪರಂಪರೆ. ನವದೆಹಲಿಗೆ ಪ್ರಿನ್ಸ್ ಚಾರ್ಲ್ಸ್ ಅಲ್ಲಿನ ಸರ್ಕಾರದ ಆದೇಶದಂತೆ ಆಗಮಿಸುತ್ತಿದ್ದು, ಇಲ್ಲಿ ಸುಸ್ಥಿರ ಇಂಧನ, ಹವಾಮಾನ ಬದಲಾವಣೆ ಮತ್ತು ಸಾಮಾಜಿಕ ಹಣಕಾಸು ವಿಷಯತಜ್ಞರ ಜೊತೆಗೆ ಮಾತುಕತೆ ಆಡಲಿದ್ದಾರೆ.

ಪ್ರಿನ್ಸ್ ಚಾರ್ಲ್ಸ್ ಭಾರತಕ್ಕೆ ಬರುವುದು ಇದು ಹತ್ತನೇ ಬಾರಿ. 2017ರಲ್ಲಿ ಪತ್ನಿ ಕ್ಯಾಮಿಲಾ ಪಾರ್ಕರ್ ಜೊತೆಗೆ ಭಾರತಕ್ಕೆ ಭೇಟಿ ನೀಡಿದ್ದರು. ಅದಕ್ಕೂ ಮುನ್ನ 1992ರಲ್ಲಿ ಆಗಿನ ಪತ್ನಿ ಪ್ರಿನ್ಸೆಸ್ ಡಯಾನಾ ಜೊತೆಗೆ ಭೇಟಿ ನೀಡಿದ್ದರು. ಈ ಸಲದ್ದು ಏಕಾಂಗಿ ಭೇಟಿ. ಇಲ್ಲಿಂದ ಪ್ರಿನ್ಸ್ ಚಾರ್ಲ್ಸ್ ನ್ಯೂಜಿಲೆಂಡಿಗೆ ತೆರಳಲಿದ್ದು ಅಲ್ಲಿ ಪತ್ನಿ ಕ್ಯಾಮಿಲಾ ಜೊತೆಗೂಡಲಿದ್ದಾರೆ.

ಬ್ರಿಟಿಷ್ ಅರಸೊತ್ತಿಗೆಯೆಂದರೆ ಪಾಶ್ಚಾತ್ಯ ಪತ್ರಕರ್ತರಿಗೆ ಎಲ್ಲಿಲ್ಲದ ಪ್ರೀತಿ. ಹಾಗಾಗಿ ಅರಮನೆಯ ತಾಜಾ ಗಾಸಿಪ್‌ಗಳಿಗೆ ಬರವಿಲ್ಲ. ಇತ್ತೀಚೆಗೆ ಹರಡಿದ ಸುದ್ದಿಯೆಂದರೆ ಪ್ರಿನ್ಸ್ ಚಾರ್ಲ್ಸ್ ತನ್ನ ಮಕ್ಕಳಾದ ವಿಲಿಯಂ ಮತ್ತು ಹ್ಯಾರಿ ನಡುವಣ ಒಳಜಗಳದಿಂದ ತೀರಾ ಬೇಸತ್ತಿದ್ದಾರೆ ಎನ್ನುವುದು. ಅರಮನೆಯೆಂದ ಮೇಲೆ ಒಳಜಗಳ ಇದ್ದದ್ದೇ ಎನ್ನುವುದು ಭಾರತೀಯರಾದ ನಮಗೆ ಗೊತ್ತಿರುವ ಸಂಗತಿಯೇ. ನಾಳೆ ಚಾರ್ಲ್ಸ್ ರಾಜನಾದರೆ, ಪ್ರಿನ್ಸ್ ಯಾರಾಗಬೇಕು ಮತ್ತು ಅಪ್ಪನ ವೈಯಕ್ತಿಕ ಆಸ್ತಿಯ ಮೇಲಿನ ಹಕ್ಕು ಯಾರದು ಎನ್ನುವ ವಿಷಯಕ್ಕೆ ಈ ಒಳಗಜಗಳ ಭುಗಿಲೆದ್ದಿದೆಯಂತೆ. ಜೊತೆಗೆ ಇಬ್ಬರು ಮಕ್ಕಳ ಪತ್ನಿಯರೂ ಅರಮನೆಯಲ್ಲಿ ಸಾಕಷ್ಟು ಬಿಸಿಗಾಳಿ ಏಳಲು ಕಾರಣವಂತೆ.

ಪ್ರಿನ್ಸ್ ಚಾರ್ಲ್ಸ್ ಕೂಡಾ ಒಂದೊಮ್ಮೆ ರಾಣಿ ಎಲಿಜಬೆತ್–2 ಗೆ ತಲೆನೋವು ಆಗಿದ್ದವನೇ. ಯೌವನದಲ್ಲಿ ಆತನಿಗೆ 'ಗರ್ಲ್‌ಫ್ರೆಂಡ್'ಗಳು ಸಾಕಷ್ಟಿದ್ದರು. ಅವರಲ್ಲಿ ಕ್ಯಾಮಿಲಾ ಕೂಡಾ ಒಬ್ಬಾಕೆ. ಚಾರ್ಲ್ಸ್ ತನ್ನ ದೇಶದ ನೌಕಾಪಡೆಯಲ್ಲಿ ನೌಕರಿ ಮಾಡಲು 1971ರಲ್ಲಿ ಹೊರಟು ಹೋದ ಬಳಿಕ ಕ್ಯಾಮಿಲಾಗೆ ಆ್ಯಂಡ್ರೂ ಪಾರ್ಕರ್ ಪರಿಚಯವಾಯಿತು, ಪ್ರೀತಿ ಬೆಳೆಯಿತು. 1973ರಲ್ಲಿ ಅವರ ಮದುವೆಯೂ ಆಯಿತು. ನೌಕಾಪಡೆಯ ಸೇವೆಯಿಂದ ಮರಳಿಬಂದ ಚಾರ್ಲ್ಸ್ ಲೇಡಿ ಸಾರಾ ಎನ್ನುವ ತರುಣಿಯ ಜೊತೆಗೆ ಪ್ರೀತಿ ಬೆಳೆಸಿಕೊಂಡ. ಆದರೆ ಸಾರಾಳ ತಂಗಿ ಡಯಾನಾ ಇನ್ನಷ್ಟು ಸುಂದರಿ. ಆಕೆಯನ್ನು ನೋಡಿದ ಬಳಿಕ ಮನಸ್ಸು ಬದಲಿಸಿದ 32ರ ಹರೆಯದ ಚಾರ್ಲ್ಸ್ ತಂಗಿಯನ್ನೇ ಮೋಹಿಸಿದ. 1981ರಲ್ಲಿ ಇಬ್ಬರ ನಿಶ್ಚಿತಾರ್ಥವೂ ನಡೆದು ಮದುವೆಯೂ ಆಯಿತು. ಡಯಾನಾ ಗಂಡನಿಗಿಂತ 12 ವರ್ಷ ಚಿಕ್ಕವಳು! ಬ್ರಿಟಿಷ್ ಅರಸೊತ್ತಿಗೆಯನ್ನು ನಖಶಿಖಾಂತ ನಡುಗಿಸಿದ ಮದುವೆಯದು. ಡಯಾನಾಳ ಜನಪ್ರಿಯತೆ ಏರುತ್ತಲೇ ಹೋದದ್ದು ರಾಣಿಗೂ ಕಿರಿಕಿರಿ ಉಂಟುಮಾಡಿತ್ತು.

ಈ ಮಧ್ಯೆ ಎರಡು ಮಕ್ಕಳ ತಾಯಿಯಾಗಿದ್ದ ಕ್ಯಾಮಿಲಾ, ಚಾರ್ಲ್ಸ್ ಜೊತೆಗೆ ಹಳೆಯ ಪ್ರೇಮವನ್ನು ಮುಂದುವರಿಸಿದ್ದಳು. ಪತ್ರಕರ್ತರು ಈ ರಹಸ್ಯಪ್ರೇಮದ ಬಗ್ಗೆ ಸಾಕಷ್ಟು ವರದಿ ಮಾಡಿದರೂ ಸಾಕ್ಷ್ಯ ಇರಲಿಲ್ಲ. ಆದರೆ 1993ರಲ್ಲಿ ಇಬ್ಬರ ನಡುವಣ ರಹಸ್ಯ ಪ್ರೇಮ/ಕಾಮ ಸಂಭಾಷಣೆಯ ಟೇಪ್ ಲೀಕ್ ಆಗಿ ಅರಮನೆಯಲ್ಲಿ ಅಲ್ಲೋಲ ಕಲ್ಲೋಲ! 'ದಿ ಮಿರರ್'ನಲ್ಲಿ ಪ್ರಕಟವಾದ ವರದಿ ಡಯಾನಾಳ ಜೀವನಕ್ಕೆ ಹೊಸ ತಿರುವು ನೀಡಿತು. ಸಂಬಂಧ ಹದಗೆಟ್ಟು ಚಾರ್ಲ್ಸ್ ಮತ್ತು ಡಯಾನಾ ಡೈವೋರ್ಸ್ ಆಯಿತು. ಬಳಿಕ ಕ್ಯಾಮಿಲಾ ಜೊತೆಗಿನ ದೈಹಿಕ ಸಂಬಂಧದ ಬಗ್ಗೆ ಚಾರ್ಲ್ಸ್ ಬಹಿರಂಗ ಹೇಳಿಕೆ ಕೊಟ್ಟರು. 1997ರಲ್ಲಿ ಡಯಾನಾ ಪ್ಯಾರಿಸ್‌ನಲ್ಲಿ ನಡೆದ ಕಾರು ಅಪಘಾತದಲ್ಲಿ ತೀರಿಕೊಂಡಳು.

ಪ್ರಿನ್ಸ್ ಚಾರ್ಲ್ಸ್ ಕ್ಯಾಮಿಲಾಳನ್ನು ಎರಡನೇ ಮದುವೆ ಮಾಡಿಕೊಳ್ಳುವುದಕ್ಕೆ ಅರಮನೆಯಲ್ಲಿಸ್ಪಷ್ಟ ವಿರೋಧವಿತ್ತು. ರಾಣಿ ಎಲಿಜಬೆತ್‌ಗೂ ಅದು ಇಷ್ಟವಿರಲಿಲ್ಲ. ತಮ್ಮ ಪ್ರಿನ್ಸ್ ಫಿಲಿಪ್ ಬಹಿರಂಗವಾಗಿ ವಿರೋಧಿಸಿದ. 99ರಿಂದ ಕ್ಯಾಮಿಲಾ ಮತ್ತು ಚಾರ್ಲ್ಸ್ ಬಹಿರಂಗವಾಗಿಯೇ ಒಟ್ಟಿಗೆ ಕಾಣಿಸಿಕೊಳ್ಳತೊಡಗಿದರು. ಅದಾಗಲೇ ಆಕೆ ಗಂಡನಿಗೆ ಡೈವೋರ್ಸ್ ಕೊಟ್ಟಾಗಿತ್ತು. ಆದರೆ ಅರಮನೆಯಲ್ಲಿ ಎಲ್ಲರ ಮನ ಒಲಿಸಲು 6 ವರ್ಷಗಳೇ ಹಿಡಿದವು. 2005ರಲ್ಲಿ ಪ್ರಿನ್ಸ್ ಚಾರ್ಲ್ಸ್ ಮತ್ತು ಕ್ಯಾಮಿಲಾ ಪಾರ್ಕರ್ ಮದುವೆ ಸಂಭ್ರಮದಿಂದಲೇ ಆಯಿತು.

1969ರಲ್ಲೇ ಚಾರ್ಲ್ಸ್‌ಗೆ 'ಪ್ರಿನ್ಸ್ ಆಫ್ ವೇಲ್ಸ್' ಎಂದು ರಾಣಿ ಬಿರುದುಕೊಟ್ಟಿದ್ದರು. ಈಗಲೂ ಆತ ಪ್ರಿನ್ಸೇ. ಅಮ್ಮ ಸತ್ತರೆ ಆತ 'ಕಿಂಗ್' ಆಗುತ್ತಾನೆ. ಆದರೆ ಬ್ರಿಟನ್ನಿನ ಜನರಿಗೆ ಚಾರ್ಲ್ಸ್‌ಗಿಂತ ಆತನ ಮಗ ಪ್ರಿನ್ಸ್ ವಿಲಿಯಮ್ಸ್ ರಾಜನಾಗಲಿ ಎಂಬ ಬಯಕೆ. ಇತ್ತೀಚೆಗೆ ನಡೆದ ಸಮೀಕ್ಷೆಯೊಂದರಲ್ಲಿ 'ಯಾರು ಕಿಂಗ್ ಆಗಬೇಕು' ಎಂಬ ಪ್ರಶ್ನೆ ಮುಂದಿಟ್ಟಾಗ ಶೇ 63ರಷ್ಟು ಜನರು ವಿಲಿಯಮ್ಸ್ ಪರ ಮತವಿತ್ತರೆ, ಚಾರ್ಲ್ಸ್ ಪರವಾಗಿ ಮತ ನೀಡಿದವರು ಶೇ 18 ಮಾತ್ರ!

ಚಾರ್ಲ್ಸ್ ಪತ್ನಿಯಾದರೂ ಕ್ಯಾಮಿಲಾಗೆ ರಾಣಿಯಾಗುವ ಯೋಗ ಇದ್ದಂತಿಲ್ಲ. ಡಯಾನಾ ಇದ್ದಾಗ ಆಕೆಗೆ 'ಪ್ರಿನ್ಸೆಸ್ ಆಫ್ ವೇಲ್ಸ್' ಎಂಬ ಬಿರುದನ್ನು ರಾಣಿಯೇ ಮುಂದೆ ನಿಂತು ನೀಡಿದ್ದರು. ಆದರೆ ಕ್ಯಾಮಿಲಾ ಈಗಲೂ 'ಡಚೆಸ್ ಆಫ್ ಕಾರ್ನ್‌ವಾಲ್' ಆಗಿಯೇ ಉಳಿದಿದ್ದಾರೆ. ಅರಮನೆಯ ಎಲ್ಲ ತಲೆನೋವುಗಳಿಂದ ದೂರವಾಗಿ 71ನೇ ಹುಟ್ಟುಹಬ್ಬದ ದಿನ ಭಾರತಕ್ಕೆ ಬರಲಿರುವ ಪ್ರಿನ್ಸ್ ಚಾರ್ಲ್ಸ್ ಇಲ್ಲಾದರೂ ನೆಮ್ಮದಿಯಿಂದ ಎರಡು ದಿನ ಇರಲಿ, ಅಲ್ವೆ?

■ ಬಿಂದು